**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ನ್ಯಾಯಾಲಯ, ಕಾರವಾರ**

**ಸಿ.ಸಿ.ನಂಃ 1265/2025**

**ಪಿ ಡಬ್ಲ್ಯೂಃ 01**

| | |
|---|---|
| ಸಾಕ್ಷಿದಾರರ ಹೆಸರು | ದರ್ಶನ. ಡಿ. ಹಂಜಗಿ |
| ತಂದೆಯ ಹೆಸರು | ಧರಮರಾಜ್ ಹಂಜಗಿ |
| ವಯಸ್ಸು | 25 ವರ್ಷ |
| ಉದ್ಯೋಗ | ಲೋನ್ ರಿಕವರಿ ಆಫಿಸರ್ |
| ವಾಸ್ತವ್ಯ | ಕಾರವಾರ |

**(ಇಂದು ದಿನಾಂಕಃ 16.08.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

ಮಾನ್ಯ ಸರ್ವೋಚ್ಚ ನ್ಯಾಯಾಲಯದ (2014) 5 ಎಸ್.ಸಿ.ಸಿ. 590 ಇಂಡಿಯನ್ ಬ್ಯಾಂಕ್ಸ್ ಅಸೋಷಿಯೇಶನ್ ವಿರುದ್ಧ ಯುನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿನ ತೀರ್ಪನ್ನು ಆಧರಿಸಿ ಈ ಪ್ರಕರಣದಲ್ಲಿ ಪಿರ್ಯಾದುದಾರ ಪರ ವಕೀಲರು ಸಲ್ಲಿಸಿರುವ ಜ್ಞಾಪನವನ್ನು ಪರಿಗಣಿಸಿ, ಈ ಹಿಂದೆ ಪಿರ್ಯಾದುದಾರರು ತಮ್ಮ ಸ್ವ ಪ್ರತಿಜ್ಞಾ ಹೇಳಿಕೆಯ ಸಲುವಾಗಿ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಪಿರ್ಯಾದುದಾರರ ಪರ ಸಾಕ್ಷ್ಯವನ್ನಾಗಿ ಪರಿಗಣಿಸಲಾಯಿತು. ಈ ಪ್ರಕಣದಲ್ಲಿ ಸ್ವ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸುವಾಗ ಪಿರ್ಯಾದಿಯೊಂದಿಗೆ ಸಲ್ಲಿಸಲಾದ ದಾಖಲೆಗಳನ್ನು ನಿಶಾನೆಗೊಳಿಸಿರದ ಕಾರಣ ಸದ್ರಿ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

(1. ದಿನಾಂಕ 30-04-2024 ರ ಕೆನರಾ ಬ್ಯಾಂಕ್, ಕಿರವತ್ತಿ ಶಾಖೆಯ ನಂಬರ್ 649160 ರ ರೂ.1,42,466/- ದ ಚೆಕ್‌ನ್ನು ನಿಪಿ-1,

2. ಸಾಕ್ಷಿ ಸದರಿ ಚೆಕ್ ನಲ್ಲಿ ಕಾಣುವ ಸಹಿಯನ್ನು ನೋಡಿ ಅದು ಆರೋಪಿಯ ಸಹಿ ಎಂದು ಹೇಳಿದ್ದಕ್ಕೆ ಆರೋಪಿಯ ಸಹಿಯನ್ನು ನಿಪಿ-1(ಎ),

3. ದಿನಾಂಕ 23-07-2024 ರ ಚೆಕ್ ರಿಟರ್ನ ಮೆಮೋವನ್ನು ನಿಪಿ-2,

4. ದಿನಾಂಕ 31-07-2024 ರ ವಕೀಲರ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-3,

5. ಆರೋಪಿಗೆ ಕಳುಹಿಸಲಾಗಿ ವಾಪಾಸು ಬಂದಿದೆ ಎನ್ನಲಾದ ವಕೀಲರ ನೋಟಿಸನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಗಿ ಅದರಲ್ಲಿರುವ ವಕೀಲರ ನೋಟಿಸನ್ನು ನಿಪಿ-4 ಎಂದು , ವಾಪಾಸು ಬಂದಿರುವ ಅಂಚೆ ಲಕೋಟೆಯನ್ನು ನಿಪಿ-5 ಎಂದು ಗುರುತಿಸಲಾಯಿತು.)

ಸಿ.ಸಿ.ನಂಃ 1265/2025

ಪಿ ಡಬ್ಲ್ಯೂಃ 01

ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಾರವಾರ